1100–1200 ರೂಪಾಯಿಗಳಾಗಿದ್ದು, ಈ ಸಂದರ್ಭದಲ್ಲಿ ಇಲಾಖೆ, ರೈತರು, ರೀಲರ್ಸ್ ಮತ್ತು ಈ ಉದ್ಯಮದಲ್ಲಿರತಕ್ಕಂಥ ಎಲ್ಲಾ ವರ್ಗದವರೂ ಸಹ ಉತ್ತಮ ಸ್ಥಿತಿಯಲ್ಲಿ ಇರುವಂಥ ವಾತಾವರಣ ನಿರ್ಮಾಣವಾಗಿದೆ ಎಂದು ನಾನು ಅವರಿಗೆ ತಿಳಿಸುತ್ತೇನೆ.

ಅಧ್ಯಕ್ಷರು : ಈಗ ಮಾನ್ಯ ಶಂಕರಲಿಂಗೇಗೌಡರು; ಇದು ಕೊನೆಯ ಉಪ ಪ್ರಶ್ನೆ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ : ರೇಷ್ಮೆ ಬೆಳೆಗಾರರಿಗೆ ಪ್ರೋತ್ಸಾಹಧನ ನೀಡಬೇಕು ಮತ್ತು ಅವರ ಸಾಲವೂ ಮನ್ನಾ ಆಗಬೇಕು. ಯಾರೋ ಒಬ್ಬಳಿಗೆ ಓಲೆ ಹಾಕಿಕೊಳ್ಳಬೇಕು ಎಂದು ಆಸೆಯಾಯಿತಂತೆ. ಸಾಲ ಮಾಡಿ ಓಲೆ ಹಾಕಿಕೊಂಡಳಂತೆ. ಓಲೆಯ ಸಾಲಕ್ಕೆ ಬಡ್ಡಿ ಕಟ್ಟಲು ಓಲೆಯನ್ನೇ ಮಾರಿದಳು. ಹೀಗಾಗಿ ಓಲೆಯೂ ಹೋಯಿತು, ಸಾಲವೂ ಉಳಿದುಕೊಂಡಿತು. ಇವತ್ತು ನಮ್ಮ ರೈತರ ಪರಿಸ್ಥಿತಿಯೂ ಹಾಗೇ ಆಗುತ್ತಿದೆ. ದಯಮಾಡಿ ಅವರಿಗೆ ಪ್ರೋತ್ಸಾಹ ಧನ ನೀಡಿ. ಕರ್ನಾಟಕದಲ್ಲಿ ರೇಷ್ಮೆ ಬೆಳೆ ತನ್ನದೇ ಆಗಿರತಕ್ಕಂಥ ಪ್ರಾಂಜಲ್ಯ ಮಾನ್ಯತೆಯನ್ನು ಪಡೆಯಬೇಕು ಎನ್ನುವುದು ನನ್ನ ಆಸೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ : ಅಧ್ಯಕ್ಷರೇ, ಸಾಲ ಮನ್ನಾ ಮಾಡದಿದ್ದರೆ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ. ಒಂದು ಲಕ್ಷ ರೂ. ಆದರೂ ಕೊಡಿ.

ಅಧ್ಯಕ್ಷರು : ಸಾಲ ಮನ್ನಾ ಮಾಡಲು ಆಗುವುದಿಲ್ಲ ಎಂದು ಹೇಳಿದ್ದಾರಲ್ಲಾ, ಇನ್ನೂ ಏಕೆ ಕೇಳುತ್ತಿದ್ದೀರಿ? ಈ ಪ್ರಶ್ನೆ ಮುಗಿಯಿತು, ಈಗ ಮುಂದಿನ ಪ್ರಶ್ನೆ, ಲಕ್ಷ್ಮೀನಾರಾಯಣರವರೇ ನೀವು ಪ್ರಶ್ನೆ ಕೇಳಿ.

ಶ್ರೀ ಕೆ.ಎಂ. ಕೃಷ್ಣಮೂರ್ತಿ : ಒಂದು ಲಕ್ಷ ರೂ. ಅಷ್ಟನ್ನೇ ಕೊಡಿ, ಇನ್ನೂ ಎರಡೂವರೆ ಲಕ್ಷ ರೂಪಾಯಿಗಳ ಸಾಲ ಹಾಗೇ ಉಳಿಯುತ್ತದೆ.

ಡಾ॥ ಭಾರತಿಶಂಕರ : ನಾನು ಆಗಲೇ ಕೇಳಿದ ಪ್ರಶ್ನೆಗೆ ಉತ್ತರ ಹೇಳಲು ಮಂತ್ರಿಗಳು ರೆಡಿ ಇದ್ದರು, ಅಷ್ಟರಲ್ಲೇ ನೀವು ಬೇರೆ ಪ್ರಶ್ನೆಗೆ ಅವಕಾಶ ಕೊಟ್ಟಿದ್ದೀರಿ. ಮಂತ್ರಿಗಳು ನನ್ನ ಪ್ರಶ್ನೆಗೆ ಉತ್ತರ ಹೇಳಲು ತಯಾರಿದ್ದಾರೆ, ಉತ್ತರ ಹೇಳಲು ಅವಕಾಶ ಕೊಡಿ.

ಅಧ್ಯಕ್ಷರು : ಈಗಾಗಲೇ ಪ್ರಶ್ನೋತ್ತರ ವೇಳೆಯ ಒಂದು ಗಂಟೆಯ ಅವಧಿ ಮುಗಿದು ಇಪ್ಪತ್ತು ನಿಮಿಷ ಜಾಸ್ತಿಯಾಗಿದೆ. ಅದಕ್ಕೆ ಒಂದು ಲೆಕ್ಕಾಚಾರ ಬೇಡವೇ? ಈಗ ಮುಂದಿನ ಪ್ರಶ್ನೆ, ಲಕ್ಷ್ಮೀನಾರಾಯಣರವರೇ ನೀವು ಪ್ರಶ್ನೆ ಕೇಳಿ.

ತುರುವೇಕೆರೆ ತಾಲ್ಲೂಕಿನಲ್ಲಿ ಮುರಾರ್ಜಿ ವಸತಿ ಶಾಲೆ

471(4142) ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ(ತುರುವೇಕೆರೆ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಕಳೆದ ಮೂರು ವರ್ಷದಿಂದ ಮೊರಾರ್ಜಿ ವಸತಿ ಶಾಲೆಗಳನ್ನು ಯಾವ್ಯಾವ ತಾಲ್ಲೂಕುಗಳಿಗೆ ನೀಡಲಾಗಿದೆ;

ಆ) ಅನೇಕ ಬಾರಿ ಪ್ರಸ್ತಾವನೆ ನೀಡಲಾಗಿದ್ದರೂ, ಸಹ ತುರುವೇಕೆರೆ ತಾಲ್ಲೂಕಿಗೆ ಮಂಜೂರು ಮಾಡದಿರಲು ಕಾರಣವೇನು;

ಇ) ಈ ವರ್ಷದಲ್ಲಿ ಮುರಾರ್ಜಿ ವಸತಿನಿಲಯವನ್ನು ತುರುವೇಕೆರೆ ತಾಲ್ಲೂಕಿಗೆ ಮಂಜೂರು ಮಾಡಲಾಗುವುದೇ;

ಈ) ಹಾಗಿದ್ದಲ್ಲಿ, ಯಾವಾಗ ಮಾಡಲಾಗುವುದು?

ಶ್ರೀ ಎ.ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು) :

ಅ) ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ 10 ಮೊರಾರ್ಜಿ ದೇಸಾಯಿ ವಸತಿ ಶಾಲೆಗಳನ್ನು ಈ ಕೆಳಕಂಡ ತಾಲ್ಲೂಕುಗಳಲ್ಲಿ ಪ್ರಾರಂಭಿಸಲಾಗಿದೆ:

ಪರಿಶಿಷ್ಟ ಜಾತಿ ವಸತಿ ಶಾಲೆಗಳು – 6

1) ಬಂಗಾರುಪೇಟೆ ತಾಲ್ಲೂಕು
2) ಶಿಕಾರಿಪುರ ತಾಲ್ಲೂಕು
3) ಕೊಳ್ಳೇಗಾಲ ತಾಲ್ಲೂಕು
4) ಉಡುಪಿ ತಾಲ್ಲೂಕು
5) ಧಾರವಾಡ ತಾಲ್ಲೂಕು
6) ಗಂಗಾವತಿ ತಾಲ್ಲೂಕು

ಅಲ್ಪಸಂಖ್ಯಾತರ ವಸತಿ ಶಾಲೆಗಳು–4

1) ಬೆಳಗಾಂ ತಾಲ್ಲೂಕು
2) ಹುಬ್ಬಳ್ಳಿ ತಾಲ್ಲೂಕು
3) ಶಿಕಾರಿಪುರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ
4) ಬಳ್ಳಾರಿ ತಾಲ್ಲೂಕು

ಆ) ನೂತನವಾಗಿ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳ ಮಂಜೂರಾತಿಗೆ ಬದಲಾಗಿ ಹಾಲಿ ಇರುವ 80 ಮೊರಾರ್ಜಿ ದೇಸಾಯಿ ವಸತಿ ಶಾಲೆಗಳನ್ನು ಅಭಿವೃದ್ಧಿಪಡಿಸಲು ಸರ್ಕಾರ ಕ್ರಮ ಕೈಗೊಳ್ಳುತ್ತಿರುವುದರಿಂದ ಹೊಸ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳನ್ನು ಮಂಜೂರು ಮಾಡಿರುವುದಿಲ್ಲ.

ಇ) ಇಲ್ಲ

ಈ) ಹಣಕಾಸು ಲಭ್ಯತೆ ಮೇರೆಗೆ ತೀರ್ಮಾನಿಸಲಾಗುವುದು.

ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ : ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಕಳೆದ ಮೂರು ವರ್ಷಗಳಿಂದಲೂ ನಾನು ನನ್ನ ತಾಲ್ಲೂಕಿಗೆ ಒಂದು ಮೊರಾರ್ಜಿ ದೇಸಾಯಿ ವಸತಿ ಶಾಲೆಯನ್ನು ಕೊಡಬೇಕು ಎಂದು ಕೇಳುತ್ತಿದ್ದೇನೆ. ಪ್ರತಿ ತಾಲ್ಲೂಕಿನಲ್ಲಿ ಒಂದು ವಸತಿ ಶಾಲೆಯನ್ನು ಮಾಡುತ್ತೇವೆ ಎನ್ನುವ ಮಾತನ್ನು ಹೇಳಿದ್ದರು. ಆದರೆ ಕಳೆದ ಮೂರು ವರ್ಷಗಳಲ್ಲಿ ಕೇವಲ 10 ತಾಲ್ಲೂಕುಗಳಿಗೆ ಮಾತ್ರ ಮೊರಾರ್ಜಿ ವಸತಿ ಶಾಲೆಯನ್ನು ಕೊಟ್ಟಿದ್ದಾರೆ. ನನ್ನ ತಾಲ್ಲೂಕಿಗೆ ಮೊರಾರ್ಜಿ ವಸತಿ ಶಾಲೆಯನ್ನು ಕೊಡಬೇಕು ಎಂದು ನಾನು ಆಗ್ರಹ ಮಾಡಿ ಕಳೆದ ಮೂರು ವರ್ಷಗಳಿಂದಲೂ ಸಂಬಂಧಪಟ್ಟ ಇಲಾಖೆಯನ್ನು ಕೇಳುತ್ತಿದ್ದೇನೆ. ಆದರೆ ಇನ್ನೂ ಮಂಜೂರು ಮಾಡಿಲ್ಲ. ಆದ್ದರಿಂದ, ಅದನ್ನು ಈ ವರ್ಷ ಮಂಜೂರು ಮಾಡಲು ಆಗುತ್ತದೆಯೇ ಎನ್ನುವುದು ನನ್ನ ಪ್ರಶ್ನೆ.

ಶ್ರೀ ಎ. ಕೃಷ್ಣಪ್ಪ : ಸರ್ಕಾರ ಇದರ ಬಗ್ಗೆ ಇನ್ನೂ ಯಾವ ಚಿಂತನೆಯನ್ನೂ ಮಾಡಿಲ್ಲ. ಆರ್ಥಿಕ ಸಂಪನ್ಮೂಲಗಳನ್ನು ಗಮನದಲ್ಲಿಟ್ಟುಕೊಂಡು, ಈ ಬಜೆಟ್ ಸೆಷನ್ ಆದಮೇಲೆ, ಸರ್ಕಾರ ಇದರ ಬಗ್ಗೆ ಮಾತುಕತೆ ಪ್ರಾರಂಭ ಮಾಡುತ್ತದೆ. ಹಾಗೆ ಮಾಡಿದಂಥ ಕಾಲದಲ್ಲಿ ನಿಮ್ಮ ಕೋರಿಕೆಯನ್ನು ಮನ್ನಣೆ ಮಾಡಲು ಪ್ರಯತ್ನ ಮಾಡುತ್ತೇವೆ.

ಶ್ರೀ ಸಿ. ಚೆನ್ನಿಗಪ್ಪ : ಸರ್ಕಾರ ಮೊರಾರ್ಜಿ ವಸತಿ ಶಾಲೆಗಳನ್ನು ಅತ್ಯುತ್ತಮವಾಗಿ ಮಾಡಿದೆ. ನಮ್ಮಲ್ಲೂ ಶಾಲೆ ಇದೆ. ಆದರೆ ಅದಕ್ಕೆ ಕಟ್ಟಡವಿಲ್ಲ. ಆದ್ದರಿಂದ, ಈಗ ಅಲ್ಲಿ ಇನ್–ಕಂಪ್ಲೀಟ್ ಆಗಿರುವ ಶಾಲಾ ಕಟ್ಟಡವನ್ನು ಕೂಡಲೇ ಕಂಪ್ಲೀಟ್ ಮಾಡಬೇಕು ಎಂದು ನಾನು ತಮ್ಮ ಮುಖಾಂತರ ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ : ಕೊಪ್ಪಳದಲ್ಲಿ ಮೊರಾರ್ಜಿ ವಸತಿ ಶಾಲೆಯನ್ನು ಪ್ರಾರಂಭಿಸುವ ಕುರಿತು ನಾನು 2–3 ಸಲ ಪ್ರಶ್ನೆಯನ್ನು ಹಾಕಿದ್ದೆ. ಕೊಪ್ಪಳ ಜಿಲ್ಲಾ ಕೇಂದ್ರವಾಗಿದ್ದು, ಅಲ್ಲಿ ಹಾಸ್ಟೆಲ್‌ನ ಅವಶ್ಯಕತೆ ಇದೆ ಎಂದು ನಾನು ಪ್ರಸ್ತಾಪ ಮಾಡಿದರೂ ಸಹ ಮಾನ್ಯ ಮಂತ್ರಿಗಳು, ಮುಂದಿನ ಸಾರಿ ಬಜೆಟ್‌ನಲ್ಲಿ ಸವಿಸ್ತಾರವಾಗಿ ಹೇಳುತ್ತೇವೆ ಎಂದು ಹೇಳಿದ್ದರು. ಅದಕ್ಕಾಗಿ ಕೇಳುತ್ತಿದ್ದೇನೆ, ಯಾವ ಮಾನದಂಡದ ಮೇಲೆ ಈ ಶಾಲೆಗಳನ್ನು ಪ್ರಾರಂಭಿಸುತ್ತೀರಿ? ಜಿಲ್ಲಾ ಕೇಂದ್ರ ಸ್ಥಾನಗಳಲ್ಲಿ ಕೂಡ ಅದನ್ನು ಕೊಡಲು ತಮ್ಮಲ್ಲಿ ಇಚ್ಛಾಶಕ್ತಿ ಇದೆಯೇ ಎಂದು ಸರ್ಕಾರದವರು ಹೇಳಬೇಕು ಎಂದು ನಾನು ತಮ್ಮ ಮೂಲಕ ಕೇಳುತ್ತಿದ್ದೇನೆ.

(ಈ ಹಂತದಲ್ಲಿ ಸದಸ್ಯರಾದ ಎ. ನಾರಾಯಣಸ್ವಾಮಿಯವರು ಉಪ ಪ್ರಶ್ನೆ ಕೇಳಲು ಎದ್ದು ನಿಂತರು)

ಅಧ್ಯಕ್ಷರು : ಹೀಗೆ ಪ್ರತಿಯೊಬ್ಬರೂ ಅವರವರ ಕ್ಷೇತ್ರಕ್ಕೆ ಸಂಬಂಧಪಟ್ಟಹಾಗೆ ಕೇಳಿದರೆ ಎಷ್ಟು ಹೊತ್ತು ಆಗುತ್ತದೆ ಎಂದು ನೀವೇ ಹೇಳಿ. ಯಾರು ಪ್ರಶ್ನೆಯನ್ನು ಕೇಳಿರುತ್ತಾರೋ, ಅವರು ಒಂದೆರಡು ಉಪ ಪ್ರಶ್ನೆಗಳನ್ನು ಕೇಳಬಹುದು ಎಂದು ನಮ್ಮ ಕಾನೂನಿಲ್ಲಿ ಇದೆ. ತಾವು ತಮ್ಮ ಕ್ಷೇತ್ರದ್ದು ಕೇಳುತ್ತೀರಿ, ಇನ್ನೊಬ್ಬರು ಅವರ ಕ್ಷೇತ್ರದ್ದು ಕೇಳುತ್ತಾರೆ. ಹೀಗಾದರೆ ಹೇಗೆ, ನೀವೇ ಹೇಳಿ, ವಸತಿ ಶಾಲೆ ಇನ್ನೂ ನಮ್ಮ ತಾಲ್ಲೂಕಿನಲ್ಲಿಯೇ ಆಗಿಲ್ಲ, ಏನು ಮಾಡುತ್ತೀರಿ?

ಶ್ರೀ ಎ. ನಾರಾಯಣಸ್ವಾಮಿ : ಅಧ್ಯಕ್ಷರೇ, ಒಂದು ನಿಮಿಷ. ನನ್ನ ಕ್ಷೇತ್ರದಲ್ಲಿ ಮೊರಾರ್ಜಿ ವಸತಿ ಶಾಲೆ ಪ್ರಾರಂಭವಾಗಿ ಆರು ವರ್ಷಗಳಾಗಿವೆ. ಅದರ ಕಟ್ಟಡಕ್ಕಾಗಿ ಜಮೀನನ್ನು ತೆಗೆದುಕೊಂಡಿದ್ದು, ಆ ಜಮೀನನ್ನು ಕ್ಲಿಯರ್ ಮಾಡಿಸಲು ನಾಲ್ಕು ವರ್ಷಗಳಾಗಿದೆ. ಈಗ ಕ್ಲಿಯರ್ ಆಗಿದೆ ಎಂದು ಹೇಳುತ್ತಿದ್ದಾರೆ. ತಮ್ಮ ಇಲಾಖೆಯಲ್ಲಿ ಒಂದು ಕೋಟಿ ರೂಪಾಯಿ ಹಣ ಇದೆ. ಇದನ್ನು ಯಾವಾಗ ಪ್ರಾರಂಭ ಮಾಡುತ್ತೀರಿ ಎಂಬುದನ್ನು ದಯವಿಟ್ಟು ಹೇಳಬೇಕು.

ಶ್ರೀ ಎ. ಕೃಷ್ಣಪ್ಪ : ಮಾನ್ಯ ಅಧ್ಯಕ್ಷರೆ, ಶ್ರೀ ಚೆನ್ನಿಗಪ್ಪನವರು ಮಾತನಾಡಿದಾಗ ಯಾವ ಜಾಗದಲ್ಲಿ ಆ ಶಾಲೆಯ ಕಟ್ಟಡ ಇನ್‌ಕಂಪ್ಲೀಟ್ ಆಗಿದೆ ಎನ್ನುವುದನ್ನು ಹೇಳಲಿಲ್ಲ. ನನ್ನ ಕ್ಷೇತ್ರದಲ್ಲಿ ಆಗಿಲ್ಲವೆಂದು ಜನರಲ್ ಆಗಿ ಹೇಳಿದ್ದಾರೆ. ಯಾವ ಜಾಗ ಎನ್ನುವುದನ್ನು ದಯವಿಟ್ಟು ಹೇಳಲಿ. ನಾನು ಅವರಿಗೆ ತಮ್ಮ ಮುಖಾಂತರ ಭರವಸೆ ಕೊಡುವುದೇನೆಂದರೆ, ಈಗಾಗಲೇ ನಾನು ಅವರ ಪ್ರದೇಶಕ್ಕೆ ಹೋಗಿದ್ದಾಗ ಕೆಲವು ಕಟ್ಟಡಗಳ ವಿಚಾರದಲ್ಲಿ ಹಿರಿಯ ಅಧಿಕಾರಿಗಳನ್ನು ಕಳುಹಿಸಿ ತನಿಖೆ ಮಾಡಿಸಿ ರಿಪೋರ್ಟ್ ತರಿಸಿದ್ದೇನೆ. ಆ ಬಗ್ಗೆ ಕ್ರಮ ತೆಗೆದುಕೊಳ್ಳಲಿಕ್ಕೆ ಆದೇಶ ಕೊಟ್ಟಿದ್ದೇನೆ. ಎರಡನೆಯದಾಗಿ ಮಾನ್ಯ ಸದಸ್ಯರಾದ ಕರಡಿ ಸಂಗಣ್ಣನವರು ಮಾತನಾಡುತ್ತಾ ಯಾವ ಮಾನದಂಡವನ್ನು ನೀವು ಉಪಯೋಗ ಮಾಡುತ್ತಿದ್ದೀರಿ ಎಂದು ಕೇಳಿದರು. ಪಾವರ್ಟಿ, ಪಾಪ್ಯುಲೇಷನ್, ಎಸ್‌ಸಿ, ಬ್ಯಾಕ್‌ವರ್ಡ್ ಕ್ಲಾಸ್ ಈ ಬಡವರು ಸಂಖ್ಯೆ ಇವೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ತಾಲ್ಲೂಕು ಕೇಂದ್ರಗಳ ಆ ಜಾಗಗಳಲ್ಲಿ ಕೊಡುತ್ತೇವೆ.

ಅಧ್ಯಕ್ಷರು : ಸ್ವಾಮಿ, ನಮ್ಮ ತಾಲ್ಲೂಕಿನಲ್ಲಿ ಪೆಂಡಿಂಗ್ ಇದೆ, ಅದನ್ನು ಸ್ಯಾಂಕ್ಷನ್ ಮಾಡಿ.

(ಗೊಂದಲ)

ಅಧ್ಯಕ್ಷರು : ಮೊರಾರ್ಜಿ ದೇಸಾಯಿ ಶಾಲೆ ತೆರೆಯಬೇಕೆಂದು ಶ್ರೀ ತಿಮ್ಮಪ್ಪನವರ ಕಾಲದಲ್ಲಿ ಅರ್ಜಿ ಕೊಟ್ಟಿದ್ದು ಅದು ಪೆಂಡಿಂಗ್‌ನಲ್ಲಿ ಇದೆ. ಅರ್ಜಿ ಕೊಟ್ಟು ಎರಡು ವರ್ಷ ಆಗಿದೆ. ಅದಕ್ಕೆ ನನಗೆ ಉತ್ತರ ಕೊಡಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಅವರಿಗಾದರೂ ಸರಿಯಾದ ಭರವಸೆ ಕೊಡಿ.

ಶ್ರೀ ಎ. ಕೃಷ್ಣಪ್ಪ : ಹಾಗಲ್ಲ, ಮಾನ್ಯ ಸದಸ್ಯರಿಗೆ ಏನು ಉತ್ತರ ಕೊಟ್ಟೆವೋ ಅದೇ ರೀತಿ ಮಾನ್ಯ ಅಧ್ಯಕ್ಷರಿಗೂ ಕೊಡಬೇಕಾಗುತ್ತದೆ. We cannot have two parameters. ಮಾನ್ಯ ಅಧ್ಯಕ್ಷರೇ, ನೀವು ಹೇಳಿರುವಂಥ ತಿಳುವಳಿಕೆ ಮಾತನ್ನು ಗಮನದಲ್ಲಿಟ್ಟುಕೊಳ್ಳುತ್ತೇವೆ. ಮಂಜೂರಾತಿ ಮಾಡುವಾಗ ಆದ್ಯತೆ ಮೇರೆಗೆ ತಮ್ಮ ಮಾತನ್ನು ನಾವು ಗಣನೆಗೆ ತೆಗೆದುಕೊಳ್ಳುತ್ತೇವೆ.

(ಗೊಂದಲ)

ಅಧ್ಯಕ್ಷರು : ಏನ್ರೀ ಇದು, ಒಂದು ಲೆಕ್ಕಾಚಾರ ಬೇಡವೇ, ಶ್ರೀ ಚಂದ್ರೇಗೌಡ್ರೇ, ದಯವಿಟ್ಟು ನಮಗೊಂದು ರಿಲೀಫ್ ಕೊಡಿ. ಪ್ರಶ್ನೋತ್ತರ ವೇಳೆಯಲ್ಲಿ 10 ಪ್ರಶ್ನೆ ಮಾತ್ರ ಇಟ್ಟುಕೊಳ್ಳೋಣ, ಇಲ್ಲದಿದ್ದರೆ ಪ್ರಶ್ನೋತ್ತರ ವೇಳೆಯನ್ನು ಎರಡು ಗಂಟೆ ಮಾಡೋಣ. That is my request.

ಶ್ರೀ ಡಿ.ಬಿ. ಚಂದ್ರೇಗೌಡ : ನಿಯಮಗಳಂತೆ ಮಾಡುವುದು ತಮ್ಮ ಕೈಯ್ಯಲ್ಲಿದೆ. ನಾವೇನು ಮಾಡುವುದಕ್ಕಾಗುತ್ತದೆ?

ಅಧ್ಯಕ್ಷರು : ಸದಸ್ಯರು ಕೋ ಆಪರೇಟ್ ಮಾಡದಿದ್ದರೆ ಹೇಗೆ? ಈಗಾಗಲೇ ಕ್ವೊಶ್ಚನ್ ಹವರ್ ಸ್ಟಾರ್ಟ್ ಆಗಿ ಒಂದೂವರೆ ಗಂಟೆ ಆಗಿದೆ.

ಶ್ರೀ ಡಿ.ಬಿ. ಚಂದ್ರೇಗೌಡ : ಅವರು ಕೋಆಪರೇಷನ್ ಕೊಡುವುದೇ ಇಲ್ಲ. ತಾವು ಅವಕಾಶ ಕೊಟ್ಟ ಹಾಗೆಲ್ಲಾ ಕೇಳುತ್ತಲೇ ಇರುತ್ತಾರೆ.

ಅಧ್ಯಕ್ಷರು : ಆಗದಿದ್ದರೆ ದಯವಿಟ್ಟು ರೂಲ್‌ಗೆ ಒಂದು ಅಮೆಂಡ್‌ಮೆಂಟ್ ತನ್ನಿ.

(ಗೊಂದಲ)

ಅಧ್ಯಕ್ಷರು : 10 ಪ್ರಶ್ನೆ ಇಟ್ಟುಕೊಂಡರೆ ಈ ತಂಟೆ ಇರುವುದಿಲ್ಲವಲ್ಲಾ. ರೂಲ್‌ಗೆ ಅಮೆಂಡ್‌ಮೆಂಟ್ ತನ್ನಿ ಎಂದು ನಾನು ತಮ್ಮಲ್ಲಿ ರಿಕ್ವೆಸ್ಟ್ ಮಾಡಿಕೊಳ್ಳುತ್ತಿರುವುದು. ಕ್ವೊಶ್ಚನ್ ಹವರ್‌ನಲ್ಲಿ 10 ಪ್ರಶ್ನೆ ಅಥವಾ 2 ಗಂಟೆ ಕಾಲಾವಧಿ ಇವರೆಡರಲ್ಲಿ ಒಂದನ್ನು ಮಾಡಿ.

ಕರ್ನಾಟಕ ಪರಿಶಿಷ್ಟ ಜಾತಿ/ವರ್ಗಗಳ ಅಭಿವೃದ್ಧಿ ನಿಗಮದಿಂದ ಕೊಳವೆ ಬಾವಿ ತೆಗೆಸುವುದು

472(4164) ಶ್ರೀ ಸೋಮಶೇಖರ್ ಬಿ. (ಮಳವಳ್ಳಿ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯ ಪರಿಶಿಷ್ಟ ಜಾತಿ / ವರ್ಗಗಳ ಅಭಿವೃದ್ಧಿ ನಿಗಮದಿಂದ ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ಪ್ರತಿವರ್ಷ 5000 ಕೊಳವೆ ಬಾವಿಗಳನ್ನು ತೋಡಿಸಲು ಆಯ-ವ್ಯಯದಲ್ಲಿ ಸರ್ಕಾರ ಘೋಷಣೆ ಮಾಡಿರುವುದು ನಿಜವೆ;

ಆ) ಹಾಗಿದ್ದಲ್ಲಿ, ಸರ್ಕಾರದಿಂದ ಇದಕ್ಕೆ ನೀಡಿರುವ ಹಣ ಎಷ್ಟು;